# ಸಿಬ್ಬಂದಿ ದಿನ ಆಚರಣೆ



**ಹಳಿಯಾಳ:** ಇಲ್ಲಿನ ಕೆಎಲ್‌ಎಸ್ ವಿಡಿಐಟಿದಲ್ಲಿ ಇತ್ತೀಚೆಗೆ ಸಿಬ್ಬಂದಿ ದಿನವನ್ನು ಸಂಭ್ರಮದಿಂದ ಆಚರಿಸಲಾಯಿತು.

ಸಿಬ್ಬಂದಿಗಳ ಕುಟುಂಬದ ಸದಸ್ಯರು ದೀಪ ಹಚ್ಚುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದ್ದು ವಿಶೇಷವಾಗಿತ್ತು.

ಬೋಧಕ ಬೋಧಕೇತರ ಸಿಬ್ಬಂದಿಗಳು ಹಾಗೂ ಅವರ ಪರಿವಾರದವರು ಮನರಂಜನಾ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಿದರು.

ಸಂಗೀತ ಕುರ್ಚಿ, ಹಗ್ಗ ಜಗ್ಗುವ ಸ್ಪರ್ಧೆ, ಅಗ್ನಿ ರಹಿತ ಅಡುಗೆ ಮುಂತಾದ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು ಮತ್ತು ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಅಮೂಲ್ಯಾ ಗಲಗಲಿ, ಸುಮದ್ವ ಕುಲಕರ್ಣಿ, ಅಭಿಜ್ಞಾ ಪಾಟೀಲ್, ಸೃಜನಾ ಜೋಶಿ, ಸ್ಪೂರ್ತಿ ಹೊನ್ನೋಜಿ ಇವರ ವಿವಿಧ ಕ್ಷೇತ್ರದ ಸಾಧನೆಯನ್ನು ಗುರುತಿಸಿ ಪುರಸ್ಕರಿಸಲಾಯಿತು.

ಡಾ. ವಿನೋದ್ ನಾಯಕ್ ಅವರ ಪಿಎಚ್‌ಡಿ ಮಾರ್ಗದರ್ಶನಕ್ಕೆ ಹಾಗೂ ಆಕಾಶವಾಣಿಯ 'ಬಿ' ಶ್ರೇಣಿ ಕಲಾವಿದರೆಂದು ಆಯ್ಕೆ ಯಾಗಿರುವ ಡಾ. ಮಹೇಂದ್ರ ದೀಕ್ಷಿತ್, ಪಿಎಚ್‌ಡಿ ಪೂರ್ಣಗೊಳಿಸಿದ ಡಾ ಸ್ನೇಹಾ ಕುಲಕರ್ಣಿ ಮತ್ತು ಡಾ ಪೂರ್ಣಿಮಾ ರಾಯ್ಕಪರ ಇವರನ್ನು ಮಹಾವಿದ್ಯಾಲಯದ ವತಿಯಿಂದ ಸನ್ಮಾನಿಸಲಾಯಿತು. ಭೋಜನ ಕೂಟದೊಂದಿಗೆ ಮುಕ್ತಾಯಗೊಂಡ ಈ ಕಾರ್ಯಕ್ರಮದಲ್ಲಿ ಸಿಬ್ಬಂದಿಗಳು ಮತ್ತು ಅವರ ಪರಿವಾರದ ಸದಸ್ಯರು ಪಾಲ್ಗೊಂಡಿದ್ದರು.

ಡಾ. ಮಹೇಂದ್ರ ದೀಕ್ಷಿತ್, ಪ್ರೊ ಲಕ್ಷ್ಮೀ ಹಟ್ಟಿಹೋಳಿ, ಪ್ರೊ ಪೂಜಾ ಶಿಂಧೆ, ಪ್ರೊ ವಿಜಯಲಕ್ಷ್ಮೀ ಕಲಾಲ ಕಾರ್ಯಕ್ರಮ ಸಂಯೋಜಿಸಿದ್ದರು.

ಮಹಾವಿದ್ಯಾಲಯದ ಏಳಿಗೆಗೆ ಪರಿಶ್ರಮಿಸುತ್ತಿರುವ ಸಿಬ್ಬಂದಿಗಳಿಗೆ ಹಾಗೂ ಪರಿವಾರದವರಿಗೆ ಮನ್ನಣೆ ನೀಡುವ ಸಲುವಾಗಿ ಈ ಕಾರ್ಯಕ್ರಮವನ್ನು ಪ್ರತಿವರ್ಷ ಹಮ್ಮಿಕೊಳ್ಳಲಾಗುತ್ತಿದೆ ಎಂದು ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.